**ಕರ್ನಾಟಕ ಸರ್ಕಾರ**

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:15:ವರ್ಗಾವಣೆ:2017-18:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:06.08.2017.

## ಸುತ್ತೋಲೆ

ವಿಷಯ: 2017-18ನೇ ಸಾಲಿನ 'ಸಿ' ವಲಯದ ಬೋಧಕರ ವಿಶೇಷ ವರ್ಗಾವಣೆ ಕೌನ್ಸಿಲಿಂಗ್ ಬಗ್ಗೆ.

ಉಲ್ಲೇಖ:
1. ವರ್ಗಾವಣೆ ಅಧಿನಿಯಮ 2012.
2. ಕಡತ ಸಂಖ್ಯೆ:ಕಾಶಿಇ:15:ವರ್ಗಾವಣೆ:2017-18ರಲ್ಲಿ ಸರ್ಕಾರದ ಅನುಮೋದಿತ ಟಿಪ್ಪಣಿ.

*****

ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಕಾಯ್ದೆ-2012ರ ನಿಯಮ (3)ರನ್ವಯ ಹೊಸದಾಗಿ ನೇಮಕಾತಿ ಹೊಂದುವ ಬೋಧಕರನ್ನು 'ಸಿ' ವಲಯದ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಬೇಕಾಗಿದ್ದು, 'ಸಿ' ವಲಯದಲ್ಲಿ ಅಗತ್ಯ ಹುದ್ದೆಗಳನ್ನು ತೆರವುಗೊಳಿಸಬೇಕಾಗಿರುವುದರಿಂದ ಉಲ್ಲೇಖ(2)ರ ಸರ್ಕಾರದ ಅನುಮೋದನೆಯನ್ವಯ 'ಸಿ' ವಲಯದ ಬೋಧಕರುಗಳಿಗೆ ಒಂದು ಬಾರಿಯ ವಿಶೇಷ ಅವಕಾಶದಡಿ ಈಗಾಗಲೇ ದಿನಾಂಕ:01-08-2017, 02-08-2017ರಂದು ಹಾಗೂ ದಿನಾಂಕ:06-08-2017 ವರ್ಗಾವಣೆ ಕೌನ್ಸಿಲಿಂಗ್ ನಡೆಸಲಾಗಿರುತ್ತದೆ. 'ಸಿ' ವಲಯದಲ್ಲಿ ಹೊಸ ನೇಮಕಾತಿಗೆ ಪೂರಕವಾಗಿ ಹುದ್ದೆಗಳನ್ನು ತೆರವುಗೊಳಿಸಬೇಕಾಗಿದ್ದು, ಮೇಲ್ಕಂಡ ದಿನಾಂಕಗಳ ಕೌನ್ಸಿಲಿಂಗ್ ನಂತರ 'ಸಿ' ವಲಯದಲ್ಲಿ ಅಗತ್ಯ ಹುದ್ದೆಗಳನ್ನು ತೆರವುಗೊಳಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ದಿನಾಂಕ:08-08-2017 ರಂದು 'ಸಿ' ವಲಯದಲ್ಲಿ 5 ವರ್ಷ ಸೇವಾ ಅವಧಿ ಪೂರೈಸಿರುವ ಬೋಧಕರಿಗೆ 'ಎ' ವಲಯದ ಖಾಲಿ ಹುದ್ದೆಗಳಿಗೆ ವಿಶೇಷ ಕೌನ್ಸಿಲಿಂಗ್ ನಡೆಸಲಾಗುವುದು.

ಸದರಿ ವರ್ಗಾವಣೆ ಕೌನ್ಸಿಲಿಂಗ್‌ಗೆ ಬೋಧಕರು ಈ ಕೆಳಕಂಡ ಸೂಚನೆಗಳನ್ವಯ ಹಾಜರಾಗಲು ಸೂಚಿಸಲಾಗಿದೆ.

1. ಎಲೆಕ್ಟ್ರಾನಿಕ್ಸ್, ಪ್ರವಾಸೋದ್ಯಮ, ಅಪರಾಧಶಾಸ್ತ್ರ, ಗೃಹವಿಜ್ಞಾನ, ಪ್ರಾಣಿಶಾಸ್ತ್ರ, ಗಣಿತಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಪತ್ರಿಕೋದ್ಯಮ, ಭೂಗೋಳಶಾಸ್ತ್ರ ಹಾಗೂ ಮನಃಶಾಸ್ತ್ರ ವಿಷಯಗಳನ್ನು ಹೊರತುಪಡಿಸಿ ಉಳಿದ ವಿಷಯಗಳಿಗೆ ಕೌನ್ಸಿಲಿಂಗ್ ನಡೆಸಲಾಗುವುದು.
2. ವರ್ಗಾವಣೆ ಕೌನ್ಸಿಲಿಂಗ್‌ಗೆ ಹಾಜರಾಗುವ ಬೋಧಕರು ಸುತ್ತೋಲೆಯೊಂದಿಗಿನ ನಿಗದಿತ ನಮೂನೆಯಲ್ಲಿ ವಿವರಗಳನ್ನು ದಾಖಲಿಸಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಂದ "ಸಿ" ವಲಯದಲ್ಲಿ 5 ವರ್ಷಗಳ ಸೇವಾ ಅವಧಿಯನ್ನು ಪೂರೈಸಿರುವ ಬಗ್ಗೆ ದೃಢೀಕರಿಸಿ ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
3. 'ಸಿ' ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕರನ್ನು 'ಸಿ' ವಲಯದಲ್ಲಿ ಸಲ್ಲಿಸಿರುವ ಗರಿಷ್ಟ ಸೇವೆಯ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿದ್ದು, ಅದರನ್ವಯ ವರ್ಗಾವಣೆ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು.



Scanned by CamScanner

4. 'ಸಿ' ವಲಯದ ಬೋಧಕರು 'ಎ' ವಲಯದ ಖಾಲಿ ಹುದ್ದೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

5. 'ಸಿ' ವಲಯದ ಬೋಧಕರು ಈಗಾಗಲೇ ದಿನಾಂಕ:01-08-2017, 02-08-2017 ಮತ್ತು ದಿನಾಂಕ:06.08.2017 ರಂದು ನಡೆದ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಸ್ಥಳ ಆಯ್ಕೆ ಮಾಡಿಕೊಂಡಿದಲ್ಲಿ ದಿನಾಂಕ:08-08-2017ರ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

6. 'ಸಿ' ವಲಯದ ಬೋಧಕರು ದಿನಾಂಕ:01-08-2017, 02-08-2017 ಮತ್ತು ದಿನಾಂಕ:06.08.2017ರಂದು ಕೌನ್ಸಿಲಿಂಗ್‌ಗೆ ಹಾಜರಾಗಿದ್ದು ಸ್ಥಳ ಆಯ್ಕೆ ಮಾಡಿಕೊಳ್ಳದಿದ್ದಲ್ಲಿ/ಗೈರು ಹಾಜರಾಗಿದ್ದಲ್ಲಿ ದಿನಾಂಕ:08-08-2017ರ ಕೌನ್ಸಿಲಿಂಗ್‌ಗೆ ಹಾಜರಾಗಲು ಅರ್ಹರಿರುತ್ತಾರೆ.

7. 2017-18ನೇ ಸಾಲಿನಲ್ಲಿ ದಿನಾಂಕ:15-05-2017, 17-05-2017, 12-06-2017, 23-06-2017 ಹಾಗೂ 24-06-2017ರಂದು ನಡೆದ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ, ವರ್ಗಾವಣೆ ಹೊಂದಿರುವ ಬೋಧಕರುಗಳು ಈ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

8. 'ಸಿ' ವಲಯದಿಂದ 'ಸಿ' ವಲಯದ ಹುದ್ದೆಗಳಿಗೆ ವರ್ಗಾವಣೆ ಹೊಂದಲು ಅವಕಾಶವಿರುವುದಿಲ್ಲ.

9. ಸದರಿ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಬೋಧಕರುಗಳಿಗೆ ವರ್ಗಾವಣೆ ಆದೇಶವನ್ನು ಹೊಸ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ಪ್ರಕ್ರಿಯೆ ನಂತರ ನೀಡಲಾಗುವುದು.

10. ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ, ಸ್ಥಳ ಆಯ್ಕೆ ಮಾಡಿಕೊಂಡ ಬೋಧಕಗಳಿಗೆ ಮುಂದಿನ ವರ್ಗಾವಣೆ ಪ್ರಕ್ರಿಯೆಯಲ್ಲಿ ಚಾಲ್ತಿಯಲ್ಲಿರುವ ವರ್ಗಾವಣೆ ಅಧಿನಿಯಮ ಅನ್ವಯಿಸುತ್ತದೆ.

11. ಸದರಿ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವ ಬೋಧಕರು ಯಾವುದೇ ವರ್ಗಾವಣೆ/ಇತರ ಭತ್ಯೆಗಳಿಗೆ ಅರ್ಹರಿರುವುದಿಲ್ಲ.

12. ವರ್ಗಾವಣೆ ಹಾಜರಾಗುವ ಬೋಧಕರು 'ಸಿ' ವಲಯದಲ್ಲಿ ಸಲ್ಲಿಸಿರುವ ಸೇವಾವಧಿಯು ಸಮಾನವಾಗಿದ್ದಲ್ಲಿ ಆ ಸಂದರ್ಭದಲ್ಲಿ ಜೇಷ್ಠತೆಯನ್ನು ನಿರ್ಧರಿಸಲು ಪ್ರಸ್ತುತ ಚಾಲ್ತಿಯಲ್ಲಿರುವ ಬೋಧಕರ ಜೇಷ್ಠತಾ ಪಟ್ಟಿಯನ್ನು ಪರಿಗಣಿಸಲಾಗುವುದು.

13. ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಗೆ ಹಾಜರಾಗಲು ಸ್ವಇಚ್ಛೆ ಇರುವ ಅಭ್ಯರ್ಥಿಗಳು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಕೌನ್ಸಿಲಿಂಗ್‌ಗೆ ಹಾಜರಾಗುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.

14. ಇಲಾಖಾ ವಿಚಾರಣೆ ಬಾಕಿ ಇರುವವರು/ಅಮಾನತ್ತು ತೆರವುಗೊಳಿಸಿ ಇತ್ತೀಚೆಗೆ ಸ್ಥಳ ನಿಯುಕ್ತಿಗೊಂಡವರು ಸದರಿ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.

15. ವರ್ಗಾವಣೆ ಕೌನ್ಸಿಲಿಂಗ್‌ನ್ನು ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು ಇಲ್ಲಿ ನಡೆಸಲಾಗುವುದು.

Shilpa
**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**
04/8/17

<u>ಇವರಿಗೆ:</u>

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ-ಮಾಹಿತಿಗಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ರಕ್ಷಾ ಕಡತ.

Scanned by CamScanner